**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**ಫೌಜದಾರಿ ಪ್ರಕರಣ ಸಂಖ್ಯೆ:402/2017**

**ಸರಕಾರದ ಪರವಾಗಿ ಃ ಅಬಕಾರಿ ಪೋಲೀಸ್ ಸೇಡಂ**

//ವಿರುದ್ಧ//

**ಆರೋಪಿ :** ನಾರಾಯಣಮ್ಮ ಗಂಡ ಬಸವರಾಜ ಕಲಾಲ
45 ವರ್ಷ, ಉಃ ಚಹಾ ಹೋಟೇಲ್
ವಾಸಃ ಗೌನಳ್ಳಿ ಗ್ರಾಮ, ತಾಃ ಸೇಡಂ, ಜಿಃ ಕಲಬುರಗಿ .

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.6/ಪ್ರಾಸಾ.1 ವಿನೋದ್ ರಾಜ್ ತಂದೆ ಸೂರ್ಯ ನಾರಾಯಣ, ತಮ್ಮ ಸಾಕ್ಷ್ಯದಲ್ಲಿ ದಿ. 18.12.2025ರಂದು, ದಿ. 25.01.2016 ರಿಂದ 18.10.2017 ರವರೆಗೆ ಅಬಕಾರಿ ಉಪ ನಿರೀಕ್ಷಕನಾಗಿ ಸೇಡಂ ವಲಯ ಕಚೇರಿಯಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ, ಸದರಿ ಪ್ರಕರಣಕ್ಕೆ ಸಂಬದ ಪಟ್ಟ ಹಾಗೆ ದಿ. 28.10.2016 ರಂದು ಮರೆಪ್ಪ ನಾಟೀಕಾರ್ ಅಬಕಾರಿ ನಿರೀಕ್ಷಕರವರಿಂದ ಕಡತವನ್ನು ಪಡೆದುಕೊಂಡು ದಿ. 02.11.2016 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 3) ಚಾಸಾ.3/ಪ್ರಾಸಾ.2 ಭೋಗಪ್ಪ ತಂದೆ ಧೂಳಪ್ಪ, ಇವರು ತಮ್ಮ ಸಾಕ್ಷದಲ್ಲಿ ದಿ.13.03.2026 ರಂದು, ಇವರು ಸನ್ 2011 ರಿಂದ 2015 ರವರೆಗೂ ಸೇಡಂ ವಲಯದಲ್ಲಿ ಅಬಕಾರಿ ರಕ್ಷಕನೆಂದು ಕರ್ತವ್ಯ ನಿರ್ವಹಿಸುತ್ತಿದ್ದರು, ದಿ. 11.06.2014 ರಂದು ಚಾಸಾ.5 ರವರು ಕರೆದು ಎರಡು ಮಾದರಿ ಬಾಟಲುಗಳನ್ನು (ಎರಡು 180 ಎಂ ಎಲ್ ನ ಓರಿಜಿನಲ್ ಚಾಯಸ ಬಾಟಲಿಗಳನ್ನು ) ಕೊಟ್ಟು ರಾಸಾಯನಿಕ ಪರೀಕ್ಷೆ ಕುರಿತು ಎಫ್ ಎಸ್ ಎಲ್ ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತಾರೆ, ದಿ. 17.06.2014 ರಂದು ಮರಳಿ ಕಛೇರಿಗೆ ಬಂದು ಚಾಸಾ.5 ರವರಿಗೆ ವರದಿಯನ್ನು ನೀಡಿರುತ್ತಾರೆ, ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿರುತ್ತಾರೆ, ನಂತರ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದುಕೆಕೊಂಡು ಚಾಸಾ.5 ರವರಿಗೆ ಒಪ್ಪಿ ಸಿರುತ್ತಾರೆ, ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಜಪ್ತಿ ಪಂಚನಾಮೆಯಲ್ಲಿರುವ ಚಾಸಾ.5 ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಶೋದನಾ ಪತ್ರವನ್ನು ನೋಡಿ ಗುರುತಿಸಿದ್ದು ಅದರಲ್ಲಿ ಚಾಸಾ.5 ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಮಾದರಿ ಮೋಹರಿನ ನಕಲನ್ನು ನೋಡಿ ಗುರುತಿಸಿದ್ದು, ಅದರಲ್ಲಿ ಚಾಸಾ.5 ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಪ್ರ ವ ವರದಿಯನ್ನು

ನೋಡಿ ಗುರುತಿಸಿದ್ದು ಅದರಲ್ಲಿ ಚಾಸಾ.5 ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಮತ್ತು 180 ಎಂ ಎಲ್ ನ ಓರಿಜಿನಲ್ ಚಾಯಸ ವಿಸ್ಕಿಯ ಬಾಟಲನ್ನು ನೋಡಿ ಗುರುತಿಸಿರುತ್ತಾರೆ, ಎಂದು ನುಡಿಯುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?

ಉಃ ಸುಳ್ಳು.

ಪ್ರಶ್ನೆ 4) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?

ಉಃ

ಪ್ರಶ್ನೆ 5) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?

ಉಃ

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಂಡು ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ ಃ 30-04-2026

ಪ್ರ.ದ. ನ್ಯಾ.ದಂ. ಸೇಡಂ.